ಎಂದು ಪಟ್ಟಿಡಿದು ಕುಂತವಳೆ. ತಿಂಗಳಿಗೆ ಎರಡು ಮೂರು ಜೊತೆ ಚಪ್ಪಲಿ ಖರೀದಿಸುವ ನನ್ನೆಂಡತಿಯ ಕಯಾಲಿಗೆ ನಾಕೈದು ತಿಂಗಳೆನ್ನುವವೊತ್ತಿಗೆ ಕೆನಾಫಿ ಕೆಳಗಿನ ಅವಳ ಚಪ್ಪಲಿ ಸ್ಟಾಂಡು ಅವಳೊಬ್ಬಳಿಗೆ ಸಾಲದೆ ಉಬ್ಬುಬ್ಬಿ ಒದ್ದಾಡುತ್ತಿರುವ ಈ ಗಳಿಗೇಲಿ. ಆರು ತಿಂಗಳಾದರು ಹಳೆ ಚಪ್ಪಲಿಯ ಉಮ್ಮುಟ ಹೊಲಿಸುವ ಬೆಲ್ಟುರಿಪೇರಿ ಮಾಡಿಸುವ ಬಹಳ ನಾಜೋಕಿನ ದೃಷ್ಟಿಕೋನದ ಅಪ್ಪನಿಗೆ, ನನ್ನೆಂಡತಿಯ ಬಣ್ಣ ಬಣ್ಣದ ತರಾವರಿಯ ಚಪ್ಪಲಿಗಳು ಅವನ ಕಣ್ಣಲ್ಲಿ ಬಾವುಗಟ್ಟಿ ಬೊಬ್ಬೆ ಹೊಡದು ಹೊಡದು ಅವೆಲ್ಲವು ಸಿಪ್ಪೆ ಸುಲಿಯಂಗಾದುವು. ಇದೇನೊ ಕಿರಣ ನಿನ್ನೆಂಡತಿ ಚಪ್ಪಲಿ ಇದ್ದಂಗೆ ಎಪ್ಪತ್ತಾರು ಚಪ್ಪಲಿ ಕೂಡಾಕ್ಕಂಡವಳೆ ಇವಳೆಂತ ಸಂಸಾರ ಮಾಡ್‌ತ್ತಾಳೊ? ಎಂಬ ಅಪ್ಪನ ಅಸಮಾಧಾನದ ಹೊಗೆಯನ್ನು ತಣ್ಣಗೆ ಮಾಡಲಾರದೆ, ನಾನೇನ್ ಕೊಡುಸುತಿಲ್ಲ ಬಿಡಪ್ಪ ಕಾಸು ನಿನ್ನದಲ್ಲ ಕಾಲವು ನಿನ್ನದಲ್ಲ, ಅವಳ ದುಡ್ಡಿನೊಳಗೆ ಅವಳ್ ತಗಂತಾ ಅವಳೆ ಎಂಬ ಮುಲಾಜುಗಳಾಚೆ ಮಾತನಾಡಿದ್ದಕ್ಕೆ ಮೂರು ತಿಂಗಳು ಮಾತು ಬಿಟ್ಟ ಅಪ್ಪನತ್ತಿರ ಇಂತ ಲೆಕ್ಕವಿಲ್ಲದ ಪ್ರಶ್ನೆಗಳಿಗೆ ಉತ್ತರ ಕೊಡಲು ಹೆಣಗಾಡುತ್ತಲೇ ಇದ್ದೇನೆ.

ಊರಲ್ಲಿ ಅಪ್ಪನನ್ನುಬ್ಬಿಸಿದರೆ ದುಡ್ಡು ಕೊಟ್ಟೆ ಕೊಡುತ್ತಾನೆಂಬ ಸದರದ ಜಾಡಿಡುಕೊಂಡ ಕೆಲವು ಗ್ರಾಮಸ್ಥರು. ಒಂದು ನಾಟಕವಾದರೂ ಅಪ್ಪನ ಹೆಸರು ಒಂದು ಭಜನೆಯಾದರೂ ಅಪ್ಪನ ಹೆಸರು ಊರಿನ ಕಾರ್ಯಕಲಾಪಗಳ ಕಟಾಔಟಿಗೆ ಅಪ್ಪನ ಫೋಟೊ ಹಾಕಿಸುವವರ ಹಿಂದೆ ಬಿದ್ದು ಅಪ್ಪ ಅವನ ಹೆಸರು ರಾರಾಜಿಸುವ ಸಮೇವಿನಲ್ಲಿ ಉಬ್ಬುಬ್ಬಿ ಹೋದ. ಊರಲ್ಲಿ ಏನಾರ ಏರುಪೇರಾಗಿ ನ್ಯಾಯ ಕಲೆತರೆ ಅಪ್ಪನನ್ನೇ ಪ್ರಧಾನವಾಗಿಟ್ಟುಕೊಂಬುವವರ ನಡುವೆ ಇನ್ನಷ್ಟು ಮಾರುಹೋಗುತ್ತ ಅವನನ್ನೊಗಳುವುದರ ಮತ್ತು ಅವನೆಸರನ್ನು ಮುಂದೆ ತರುವವರ ಹಿಂದೆ ಬಿದ್ದು ಒಂಥರ ನಾನು ನಾನೇ ಎಂಬ ಮೋಹದ ಖಯಾಲಿಗೆ ಬಿದ್ದುಬಿಟ್ಟ.

ಹಿಂಗೆ ಊರಲ್ಲಿ ಮನೆದೇವರ ಯಜಮಾನಿಕೆಯ ಪಟ್ಟ ಕಟ್ಟಿಕೊಂಡು ಹೆಸರಿಗೆ ಒದ್ದಾಡುತ್ತಾ ಎಲ್ಲದಕ್ಕೂ ಮುಂದೆ ನಿಂತು, ಕಾರುಬಾರುಗಳಿಗೆ ಇದ್ದ ಕುಲೋಸ್ತರ ನಡುವೆ ಕಾರ್ಯಕಲಾಪಗಳನ್ನು ಮಾಡಿ ಸೈ ಎನಿಸಿಕೊಳ್ಳಲು ಎಣಗಾಡುತ್ತಿದ್ದವನ ಕಿವಿಗೆ ಒಂದು ದಿನ ಮೂರನೆ ದೊಡ್ಡಪ್ಪನ ಮಗ ಪೋನ್ ಮಾಡ್ದ. 'ಅಲ್ಲಪ್ಪ ನಿನಗೆ ನೆಟ್ಟಗೆ ಕಿವಿ ಕೇಳಸಲ್ಲ ವಯಸ್ಸು ಬೇರೆ ಆಯಿತು, ನಿನಗ್ಯಾಕ್ ಬೇಕಿತ್ತಪ್ಪ ಈ ಯಜಮಾನಿಕೆ ಪಟ್ಟ?' ಎಂದು ಅವನಿಗಿದ್ದ ಸಣ್ಣ ಹೊಟ್ಟೆಉರಿಯಲ್ಲಿ ಮೂದಲಿಸಿಬಿಟ್ಟ. 'ಲೇ ನಾನೇನ್ ಬೇಕಂತ ಬಂದಿದ್ದೀನೇನೊ ಗೌಡ್ರು ಗಮ್‌ಕಾರಗಳೆಲ್ಲ ಸೇರಿ ಕಟ್ಟೆವರ್ ಕಣೋ ಅವರನ್ನೆಲ್ಲ ನಿಲ್ಲಿಸಿಕೊಂಡು ಉಗಿಯೊ. ಈಗ್‌ಲು ಈ ಪಟ್ಟಾನ ನಿನಗೆ ಕಟ್ಟತ್ತಾರೆಂದ್ರೆ ಈಗ್ಲೆ ನಿಂತ್ ನಿಲವಲ್ಲೆ ಬಿಟ್ಟುಕೊಡುತ್ತೀನ್ ಕಣೊ' ಎಂಬ ಅಪ್ಪನ ಮಾತಿಗೆ, ಎಷ್ಟು ದಿವಸದಿಂದ ಕಾಯ್‌ತಿದ್ದಪ್ಪ ಈ ಬೆನ್ನಿಗೆ ಚೂರಿ ಹಾಕೊ ಕೆಲಸ ಮಾಡಾಕೆ? ನಮಗೆ ವಯಸ್ಸಾಯಿತು ಇರೊ ಮಕ್ಕಳಿಗೆ ಜವಾಬ್ದಾರಿ ಬರಲಿ ಅಂತ ಯೋಚನೆ ಮಾಡ್ಲಿಲ್ಲವಲ್ಲ? ಕೊನೆಗೂ ನಿನ್ನ ಸಣ್ಣತನ ತೋರಸೇ ಬಿಟ್ಟಲ್ಲ? ಎಂದು ಮೂದಲಿಸಿದ ಮಾತಿಗೆ ಮಾತುಗಳು ಉಜ್ವಾಡಿ ಅವನ ಮತ್ತು ಅಪ್ಪನ ನಡುವಿನ ಹಗೆತನವೆಂಬೋದು ಊರಿಗೋದಾಗಲೆಲ್ಲ ಬಾವುಗಟ್ಟತೊಡಗಿತು.

ರೀ ಅಕ್ಕ ಭಾವ ಹೋದಂಗೆ ನಾವೂ ಎಲ್ಲಾದರೂ ಮನೆ ಮಾಡಿಕೊಂಡು ಹೊರಟರೆ ಸರಿಯಪ್ಪ. ನನಗಿಲ್ಲಿ ನೆಮ್ಮದೀನೆ ಇಲ್ಲ. ನನ್ನೆಂಡತಿಯ ಬಿಸಿಯುಸಿರು ದಿನಾ ರಾತ್ರಿ ನನ್ನ ನೆಮ್ಮದಿಯ ನಿದ್ದೆಯನ್ನು ನುಂಗತೊಡಗಿತು. ಅವನೋದ ಅನುತ ನಾನು ಹೋದ್ರೆ ಮುಂದೆ ಅಪ್ಪ ಅಮ್ಮುನ್ನ ನೋಡಕಳವರ್‍ಯಾರು, ಕಾಲು ತಗದು ಹೋಗಾದು ದೊಡ್ಡದಲ್ಲ. ಎಲ್ಲರೂ ಒಂದೆ ತರದ ಕೆಲಸ ಮಾಡೀರೆ ನಮ್ಮ ಅವರ ನಡುವಿನ ವೆತ್ಯಾಸಗಳೇನು? ಇರಮ್ಮ ಎರಡ್ ದಿನ ಅಪ್ಪ ಅಮ್ಮ ಈಗೀಗ ಸುಧಾರಿಸಿಕಳತಾ ಅವರೆ, ನೀನು ದುಡುಕ್ ಬ್ಯಾಡ? ಈಗಿರೋ ಲೆಕ್ಕದಲ್ಲಿ ದೊಡ್ಡಸೊಸೆಗಿಂತ ಚಿಕ್ಕಸೊಸೆನೆ ವಾಸಿಯೆಂದು ಅಮ್ಮ ಬಂಧು ಬಳಗದವರ ನಡುವೆ ನಿನ್ನುನ್ನೆ ಗುಣಗಾನ ಮಾಡ್ ತಾ ಅವಳೆ. ಅವರು ಸೋಲ್ತಾರೆ ಅಂದ್ ಮ್ಯಾಲೆ ನೀನು ಸೋಲ್ ಕಂಡಿರ್ ಬೇಕೆಂದು ಹೆಂಡತಿಯನ್ನು ಸಮಾಧಾನಿಸಿದೆ. ತುಟಿ ಎರಡು ಮಾಡದೆ ದಡಗ್ಗನೆ ಮೊಗ್ಗುಲು ತಿರುಗಿಕೊಳ್ಳುತ್ತಾಳೆ. ಮಲಗೀರೆ ಮಲಗಬಹುದು ಕುಂತರೆ ಕೂರ್ ಬಹುದು ನಾನು ಮಲಗುವ ಮಂಚವು ಕೂಡ ಶಿವ ಶಿವ ಅಂತ ಲೊಚ ಗುಟ್ಟುತ್ತದೆ. ಅಣ್ಣ ನಾಳೆ ಬರುವ ಬಸವನ ಜಯಂತಿಗೆ ಪಾಯದ ಪೂಜೆ